2018 ಕ.ತೀ.ವ. 137

ಧಾರವಾಡ ಪೀಠ

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ವ್ಯವಸ್ಥಾಪಕರು, ನ್ಯಾಷನಲ್ ಇನ್‌ಷೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಶೃತಿ .ವಿ.ಎ ಮತ್ತು ಇತರರು*

**ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣದಡಿಯಲ್ಲಿ ಸಂಕೀರ್ಣ ಮೊದಲ ಅಪೀಲು.**

**ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ–IX, ಬಳ್ಳಾರಿ ಇವರ ಮುಂದೆ ದಾಖಲು ಮಾಡಿದ ಎಂ.ವಿ.ಸಿ. ಸಂಖ್ಯೆ. 60/2012ರಲ್ಲಿ ದಿನಾಂಕ 14.05.2012 ರಂದು ನೀಡಿದ ತೀರ್ಪು ಮತ್ತು ಐತೀರ್ಪಿನಿಂದಾಗಿ ಈ ಎರಡೂ ಅಪೀಲುಗಳು, ಉದ್ಭವಿಸಿವೆ. ವಿಮಾದಾರನು, ಪರಿಹಾರದ ಮೊತ್ತವನ್ನು ಪ್ರಶ್ನಿಸಿ ಎಂಎಫ್‌ಎ ಸಂ.24620/2012ನ್ನು ದಾಖಲು ಮಾಡಿದ್ದಾನೆ. ಕ್ಲೇಮುದಾರರು, ಹೆಚ್ಚಳಕ್ಕಾಗಿ ಎಂಎಫ್‌ಎ ಸಂ.24380/2012ನ್ನು ದಾಖಲು ಮಾಡಿದ್ದಾರೆ.**

**ಆಪಾದಿತ ಟ್ರಾಕ್ಟರ್ ಟ್ರೇಲರ್ ಮತ್ತು ಮೃತ ಓಡಿಸುತ್ತಿದ್ದ ಮೋಟಾರು ಸೈಕಲ್ ನಡುವೆ ದಿನಾಂಕ 19.11.2011 ರಂದು ಸಂಭವಿಸಿದ ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಗಾಯಗಳಿಂದಾಗಿ ಶೈಲೇಶ್ ಎನ್ನುವವರು ಮರಣ ಹೊಂದಿದ್ದಾರೆ.**

* ಸಂಕೀರ್ಣ ಮೊದಲ ಅಪೀಲು ಸಂಖ್ಯೆ: 24620/2012 ಇದರೊಂದಿಗೆ ಎಂ.ಎಫ್.ಎ. 24380/2012 (ಎಂ.ವಿ.), ದಿನಾಂಕ: 15ನೇ ಡಿಸೆಂಬರ್, 2015.

ಕ್ಲೇಮುದಾರರು, ಪರಿಹಾರಕ್ಕಾಗಿ ತಕ್ಷಣವೇ ಅರ್ಜಿಯನ್ನು ಸಲ್ಲಿಸಿದ್ದಾರೆ. ಅಧಿವಿಚಾರಣೆಯ ಅವಧಿಯಲ್ಲಿ, ಕ್ಲೇಮುದಾರರ ಪರವಾಗಿ ಮೂವರು ಸಾಕ್ಷಿದಾರರನ್ನು, ಪರೀಕ್ಷಿಸಲಾಗಿದೆ ಮತ್ತು 23 ನಿಶಾನೆಗಳನ್ನು ಗುರುತು ಮಾಡಲಾಗಿದೆ. ಪ್ರತ್ಯರ್ಜಿದಾರರ ಪರವಾಗಿ ಯಾರೇ ಸಾಕ್ಷಿದಾರರನ್ನು ಪರೀಕ್ಷಿಸಿರುವುದಿಲ್ಲ. ವಿಮಾಪಾಲಿಸಿಯನ್ನು, ಸಮ್ಮತಿ ಮೂಲಕ ಗುರುತು ಮಾಡಲಾಗಿದೆ. ದಾಖಲೆ ಮೇಲೆ ರೂಪಿಸಿದ ಸುಸಂಬದ್ಧ ಅಂಶಗಳು ಮತ್ತು ಸಾಮಗ್ರಿಯನ್ನು ಪರಿಗಣಿಸಿದ ತರುವಾಯ, ನ್ಯಾಯಾಧಿಕರಣವು ವಾರ್ಷಿಕ ಶೇಕಡಾ 6 ರಷ್ಟು ಬಡ್ಡಿಯೊಂದಿಗೆ 47,20,116/– ರೂಪಾಯಿಗಳ ಮೊತ್ತದ ಐತೀರ್ಪು ನೀಡಿದೆ. ವಿಮಾದಾರ ಮತ್ತು ಕ್ಲೇಮುದಾರರು ಇಬ್ಬರೂ, ಪರಿಹಾರ ಮೊತ್ತದಿಂದ ಬಾಧಿತರಾಗಿದ್ದಾರೆ. ಹಾಗಾಗಿ, ಈ ಅಪೀಲುಗಳನ್ನು ದಾಖಲು ಮಾಡಲಾಗಿದೆ.

ಅಪಘಾತದ ದಿನಾಂಕದಂದು, ಮೃತನು, ಪರಿವೀಕ್ಷಣಾ ಅವಧಿಯಲ್ಲಿದ್ದನು, ಅದನ್ನು ಕಾಲದಿಂದ ಕಾಲಕ್ಕೆ ವಿಸ್ತರಿಸಲಾಗುತ್ತಿತ್ತು. ಆದ್ದರಿಂದ, ಅವನಿಂದ ಗಳಿಸಲಾದ ಮಜೂರಿಗಳನ್ನು, ನಿಯತ ಮತ್ತು ಖಾಯಂ ಸ್ವರೂಪದಂತೆ ಅರ್ಥೈಸಲಾಗದು. ಒಪ್ಪಿತವಾಗಿರುವಂತೆ ಮೃತನು ನಿಶಾನೆ ಪಿ.9ರ ಸಾಕ್ಷ್ಯದಂತೆ ಮೆಕಾನಿಕಲ್ ಇಂಜಿನಿಯರ್ ಬಿ.ಇ. ಪದವೀಧರನಾಗಿದ್ದಾನೆ. ಆತನು ನಿಶಾನೆ ಪಿ.18ರ ಪ್ರಕಾರ ಸ್ನಾತಕೋತ್ತರ ಪದವಿ ಇಂಜಿನಿಯರ್ ಪ್ರಶಿಕ್ಷಣಾರ್ಥಿ ಹುದ್ದೆಗೆ ದಿನಾಂಕ 01.09.2008 ರಂದು ನೇಮಕಗೊಂಡಿದ್ದಾನೆ. ನಿಶಾನೆ ಪಿ.20, ಮೃತನ ಸೇವೆಗಳನ್ನು ಮತ್ತು ಕೊಡುಗೆಯನ್ನು ಮನ್ನಿಸಿ ಹಾಗೂ ಗುರುತಿಸಿ, ಆತನಿಗೆ, 1ನೇ ಏಪ್ರಿಲ್ 2011 ರಿಂದ ಜಾರಿಯಾಗುವಂತೆ ಸಹಾಯಕ ವ್ಯವಸ್ಥಾಪಕರ ಹುದ್ದೆಗೆ ಬಡ್ತಿ ನೀಡಲಾಗಿದೆ. ನಿಶಾನೆ ಪಿ.20ರ ಹಿನ್ನೆಲೆಯಲ್ಲಿ, ಮೃತನು, ಖಾಯಂ ಉದ್ಯೋಗದಲ್ಲಿರುವುದಿಲ್ಲ ಮತ್ತು ಆದಾಯದ ಸ್ಥಿರ ಮೂಲವನ್ನು, ಹೊಂದಿರುವುದಿಲ್ಲವೆಂಬ ವಿಮಾಕರ್ತನ ಪರವಾಗಿನ ಮಾನ್ಯ ವಕೀಲರ ವಾದವು ಸಮರ್ಥನೀಯವಲ್ಲದಾಗಿದೆ ಹಾಗಾಗಿ ಅದು ತಿರಸ್ಕರಿಸುವುದಕ್ಕೆ ಮಾತ್ರ ಅರ್ಹವಾಗಿದೆ. ಅದಕ್ಕನುಸಾರವಾಗಿ, ಮೃತನು, ತನ್ನ ಜೀವನದಲ್ಲಿ, ಖಾಯಂ ಉದ್ಯೋಗದಲ್ಲಿದ್ದನು ಮತ್ತು ಒಳ್ಳೆಯ ನಿರೀಕ್ಷಿತ ಭವಿಷ್ಯವನ್ನು ಹೊಂದಿದ್ದನೆಂದು ಅಭಿಪ್ರಾಯಪಟ್ಟು, ಈ ಅಂಶಕ್ಕೆ ನಾವು ಕ್ಲೇಮುದಾರರ ಪರವಾಗಿ ಉತ್ತರಿಸಿದ್ದೇವೆ.

ಅವಲಂಬನಾ ನಷ್ಟದ ಮೊತ್ತವನ್ನು ನಿರ್ಧರಿಸುವುದಕ್ಕೆ, ನಮ್ಮ ದೃಷ್ಟಿಯಲ್ಲಿ, ಗಳಿಕೆ ಸಾಮರ್ಥ್ಯವನ್ನು ನಿರ್ಧರಿಸುವುದಕ್ಕೆ, ನಿಶಾನೆ ಪಿ.7ನ್ನು ಮಾನದಂಡವಾಗಿ ಇಟ್ಟುಕೊಳ್ಳುವುದು ನ್ಯಾಯ ಸಮ್ಮತ ಮತ್ತು ಸಮುಚಿತವಾಗಿದೆ. ನಿಶಾನೆ ಪಿ.7ರ ಪ್ರಕಾರ ಪ್ರತಿ ತಿಂಗಳು ಮೃತನ ಒಟ್ಟು ಗಳಿಕೆಗಳು, 37,054/– ರೂಪಾಯಿಗಳಾಗಿವೆ. ವ್ಯತ್ಯಾಸಗೊಳ್ಳುವ ಅಂಶದ 300/– ರೂಪಾಯಿಗಳ ಪ್ರೋತ್ಸಾಹ ಧನ, ಆದಾಯ ತೆರಿಗೆ 2,423/– ರೂಪಾಯಿಗಳು ಮತ್ತು ವೃತ್ತಿ ತೆರಿಗೆ 200/– ರೂಪಾಯಿಗಳನ್ನು, ಗಳಿಕೆಗಳಿಂದ ಕಡಿತಗೊಳಿಸಲು ಅಗತ್ಯಪಡಿಸಲಾಗಿದೆ. ಮೃತನಿಗೆ, ಮೂವರು ಅವಲಂಬಿತರಿದ್ದಾರೆ. ಆದ್ದರಿಂದ, ತನ್ನ ಗಳಿಕೆಯ 1/3ನ್ನು, ತನ್ನ ವೈಯಕ್ತಿಕ ವೆಚ್ಚಗಳ ಸಲುವಾಗಿ ಕಡಿತಗೊಳಿಸಲು ಇಚ್ಛಿಸುತ್ತೇವೆ. ಪ್ರೋತ್ಸಾಹ ಧನ, ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆ ಕಡಿತದ ತರುವಾಯ, ಮೃತನ ಗಳಿಕೆಗಳು 34,131/– ರೂಪಾಯಿಗಳಿಗೆ ಬರುತ್ತದೆ. ಭವಿಷ್ಯತ್ತಿನ ನಿರೀಕ್ಷೆಗಳ ನಷ್ಟದ ಸಲುವಾಗಿ (17,065/–) ಶೇಕಡಾ 50 ರಷ್ಟನ್ನು ಸೇರಿಸಿದ್ದು, ಆತನ ಮರಣದ ಸಮಯದಲ್ಲಿ ಮೃತನ ಗಳಿಕೆ ಸಾಮರ್ಥ್ಯವು, 51,196/– ರೂಪಾಯಿಗಳಿಗೆ ಲೆಕ್ಕ ಹಾಕಲಾಗಿದೆ. ಆತನ, ವಯಸ್ಸು 29 ವರ್ಷಗಳಾಗಿದೆ. ಹಾಗಾಗಿ 17, ಅನ್ವಯಿಸುವ ಗುಣಕವಾಗಿದೆಯೆಂದು ಅಭಿಪ್ರಾಯಪಟ್ಟು ಕ್ಲೇಮುದಾರರ ಅಪೀಲನ್ನು ಅಂಗೀಕರಿಸಲಾಗಿದೆ ಹಾಗೂ ವಿಮಾದಾರನಿಂದ ದಾಖಲು ಮಾಡಿದ ಅಪೀಲನ್ನು ವಜಾಗೊಳಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *(2008) 2 ಎಸ್‌ಸಿಸಿ 763*
   *ನ್ಯಾಷನಲ್ ಇನ್‌ಷೂರೆನ್ಸ್ ಕಂಪನಿ ಲಿಮಿಟೆಡ್*
   *–ವಿರುದ್ಧ– ಇಂದಿರಾ ಶ್ರೀವಾಸ್ತವ ಮತ್ತು ಇತರರು (ಉಲ್ಲೇ) 9*
2. *(2012) 6 ಎಸ್‌ಸಿಸಿ 421*
   *ಸಂತೋಷ್ ದೇವಿ –ವಿರುದ್ಧ– ನ್ಯಾಷನಲ್ ಇನ್‌ಷೂರೆನ್ಸ್*
   *ಕಂಪನಿ ಲಿಮಿಟೆಡ್ ಮತ್ತು ಇತರರು (ಉಲ್ಲೇ) 13*

ಅಪೀಲುದಾರರ ಪರ : ಶ್ರೀ ಎಸ್.ಕೆ. ಕಾಯಾಕಾಮತ್ – ವಕೀಲರು.
1 ಮತ್ತು 3ನೇ ಪ್ರತ್ಯಪೀಲುದಾರರ ಪರ : ಶ್ರೀ ಲಕ್ಷ್ಮಿಕಾಂತರೆಡ್ಡಿ – ವಕೀಲರು.
4 ಮತ್ತು 5ನೇ ಪ್ರತ್ಯಪೀಲುದಾರರಿಗೆ ನೋಟೀಸು ಜಾರಿಗೊಳಿಸಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್:**

ಈ ಎರಡೂ ಅಪೀಲುಗಳು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ–IX, ಬಳ್ಳಾರಿ (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ)' ಇವರ ಮುಂದೆ ದಾಖಲು ಮಾಡಿದ ಎಂ.ವಿ.ಸಿ. ಸಂಖ್ಯೆ. 60/2012ರಲ್ಲಿ ದಿನಾಂಕ 14.05.2012 ರಂದು ನೀಡಿದ ತೀರ್ಪು ಮತ್ತು ಐತೀರ್ಪಿನಿಂದಾಗಿ ಉದ್ಭವಿಸಿವೆ. ವಿಮಾದಾರನು, ಪರಿಹಾರದ ಮೊತ್ತವನ್ನು ಪ್ರಶ್ನಿಸಿ ಎಂಎಫ್ಎ ಸಂ.24620/12ನ್ನು ದಾಖಲು ಮಾಡಿದ್ದಾನೆ. ಕ್ಲೇಮುದಾರರು, ಹೆಚ್ಚಳಕ್ಕಾಗಿ ಎಂಎಫ್ಎ ಸಂ.24380/2012ನ್ನು ದಾಖಲು ಮಾಡಿದ್ದಾರೆ.

2. ಆಪಾದಿತ ಟ್ರಾಕ್ಟರ್ ಟ್ರೈಲ್ಲರ್ ಮತ್ತು ಮೃತ ಓಡಿಸುತ್ತಿದ್ದ ಮೋಟಾರು ಸೈಕಲ್ ನಡುವೆ ದಿನಾಂಕ 19.11.2011 ರಂದು ಸಂಭವಿಸಿದ ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಗಾಯಗಳಿಂದಾಗಿ ಶೈಲೇಶ್ ಎನ್ನುವವರು ಮರಣ ಹೊಂದಿದ್ದಾರೆ.

3. ಕ್ಲೇಮುದಾರರು, ಪರಿಹಾರಕ್ಕಾಗಿ ತಕ್ಷಣವೇ ಅರ್ಜಿಯನ್ನು ಸಲ್ಲಿಸಿದ್ದಾರೆ. ಅಧಿವಿಚಾರಣೆಯ ಅವಧಿಯಲ್ಲಿ, ಕ್ಲೇಮುದಾರರ ಪರವಾಗಿ ಮೂವರು ಸಾಕ್ಷಿದಾರರನ್ನು, ಪರೀಕ್ಷಿಸಲಾಗಿದೆ ಮತ್ತು 23 ನಿಶಾನೆಗಳನ್ನು ಗುರುತು ಮಾಡಲಾಗಿದೆ. ಪ್ರತ್ಯರ್ಜಿದಾರರ ಪರವಾಗಿ ಯಾರೇ ಸಾಕ್ಷಿದಾರರನ್ನು ಪರೀಕ್ಷಿಸಿರುವುದಿಲ್ಲ. ವಿಮಾಪಾಲಿಸಿಯನ್ನು, ಸಮ್ಮತಿ ಮೂಲಕ ಗುರುತು ಮಾಡಲಾಗಿದೆ. ದಾಖಲೆ ಮೇಲೆ ರೂಪಿಸಿದ ಸುಸಂಬದ್ಧ

ಅಂಶಗಳು ಮತ್ತು ಸಾಮಗ್ರಿಯನ್ನು ಪರಿಗಣಿಸಿದ ತರುವಾಯ, ನ್ಯಾಯಾಧಿಕರಣವು ವಾರ್ಷಿಕ ಶೇಕಡಾ 6 ರಷ್ಟು ಬಡ್ಡಿಯೊಂದಿಗೆ 47,20,116/– ರೂಪಾಯಿಗಳ ಮೊತ್ತದ ಐತೀರ್ಪು ನೀಡಿದೆ. ವಿಮಾದಾರ ಮತ್ತು ಕ್ಲೇಮುದಾರರು ಇಬ್ಬರೂ, ಪರಿಹಾರ ಮೊತ್ತದಿಂದ ಬಾಧಿತರಾಗಿದ್ದಾರೆ. ಹಾಗಾಗಿ, ಈ ಅಪೀಲುಗಳನ್ನು ದಾಖಲು ಮಾಡಲಾಗಿದೆ.

4. ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿ, ಶ್ರೀ ಲಕ್ಷ್ಮಿಕಾಂತ ರೆಡ್ಡಿ ಮತ್ತು ವಿಮಾದಾರನ ಪರವಾಗಿ ಮಾನ್ಯ ನ್ಯಾಯವಾದಿ ಶ್ರೀ ಎಸ್.ಕೆ. ಕಾಯಾಕಾಮತ್‌ರ ಅಹವಾಲುಗಳನ್ನು ಆಲಿಸಲಾಗಿದೆ.

5. ಐತೀರ್ಪು ನೀಡಲಾದ ಪರಿಹಾರದ ಮೊತ್ತವು, ಹೆಚ್ಚು ಅಸಮಾನುಪಾತವಾಗಿದೆ ಯೆಂದು ಶ್ರೀ ಎಸ್.ಕೆ. ಕಾಯಾಕಾಮತ್ ವಾದವನ್ನು ಮಂಡಿಸಿದ್ದಾರೆ. ಕ್ಲೇಮುದಾರರು ದಾಖಲೆ ಮೇಲೆ ಮಂಡಿಸಿದ ಸಾಕ್ಷ್ಯವು ಒಟ್ಟಾರೆ ಗಳಿಕೆ ಸಾಮರ್ಥ್ಯವನ್ನು ನಿರೂಪಿಸುವುದಿಲ್ಲ. ಮೃತ ಶೈಲೇಶ್, ಪ್ರೊಬೇಷನ್ ಮೇಲೆ ಇದ್ದಾನೆ ಮತ್ತು ಖಾಯಂ ಉದ್ಯೋಗಿಯಾಗಿರುವುದಿಲ್ಲ. ವಾಹನ ಭತ್ಯೆಯನ್ನು ವೇತನದ ಭಾಗದಂತೆ ಅನ್ವಯಿಸಿ ನ್ಯಾಯಾಧಿಕರಣ ತಪ್ಪು ಮಾಡಿದೆ. ನಿಶಾನೆ ಪಿ.7ರ ಕಡೆಗೆ ಗಮನ ಸೆಳೆಯುತ್ತಾ, ನ್ಯಾಯಾಧಿಕರಣವು, ಕೇವಲ ಭಾಗಗಳನ್ನು ಅಂದರೆ, ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಗಳನ್ನು ಕಳೆದು ಪ್ರತಿ ತಿಂಗಳು 34,431/– ರೂಪಾಯಿಗಳಂತೆ ಮೃತನ ಗಳಿಕೆ ಸಾಮರ್ಥ್ಯವನ್ನು ತೆಗೆದುಕೊಳ್ಳಲಾಗಿದೆಯೆಂದು ಆತನು ವಾದವನ್ನು ಮಂಡಿಸಿದ್ದಾನೆ. ಆತನ ಪ್ರಕಾರ, ವಾಹನ ಭತ್ಯೆ, ವೈದ್ಯಕೀಯ ಮರುಪಾವತಿ ವೆಚ್ಚ, ನಿಗದಿತ ಉತ್ಪಾದನಾ ಪ್ರೋತ್ಸಾಹ ಧನ ಮತ್ತು ವಿಶೇಷ ಭತ್ಯೆಯ ಅಡಿಯಲ್ಲಿ ಮೃತನಿಗೆ ಸಂದಾಯ ಮಾಡಿರುವುದನ್ನು ನಿವ್ವಳ ಗಳಿಕೆ ಸಾಮರ್ಥ್ಯವನ್ನು ಲೆಕ್ಕ ಹಾಕುವಾಗಿ ಕಳೆಯಬೇಕೆಂಬುದಾಗಿದೆ. ಮೇಲಿನ ವಾದಗಳೊಂದಿಗೆ ಐತೀರ್ಪನ್ನು ಟೀಕಿಸುತ್ತಾ, ವಿಮಾದಾರನಿಂದ ದಾಖಲು ಮಾಡಿದ ಅಪೀಲನ್ನು ಅಂಗೀಕರಿಸುವಂತೆ ಮತ್ತು ಕ್ಲೇಮುದಾರರಿಂದ ದಾಖಲು ಮಾಡಿದ ಅರ್ಜಿಯನ್ನು ವಜಾಗೊಳಿಸುವಂತೆ ಕೋರಿದ್ದಾರೆ.

6. ಮತ್ತೊಂದು ಕಡೆ, ಮೃತನ ವೇತನವು ವಾಸ್ತವವಾಗಿ ದಿನಾಂಕ 01.04.2011 ರಿಂದ ಜಾರಿಯಾಗುವಂತೆ ಪರಿಷ್ಕರಣೆಗೊಂಡಿದ್ದು ಅದನ್ನು ದಿನಾಂಕ 12.05.2011ರ ಪತ್ರ ವ್ಯವಹಾರದ ಮೂಲಕ ಉದ್ಯೋಗದಾತನಿಂದ ನೀಡಿರುವುದನ್ನು ನಿಶಾನೆ ಪಿ.20 ಸಾಕ್ಷ್ಯವಾಗಿ ನೋಡಬಹುದೆಂದು ಕ್ಲೇಮುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ಆದ್ದರಿಂದ, ಆತನ ಪ್ರಕಾರ, ನಿಶಾನೆ ಪಿ.7ನ್ನು ಅಂಗೀಕರಿಸಿರುವುದು ಮತ್ತು ಕೇವಲ 37,054/– ರೂಪಾಯಿಗಳ ಒಟ್ಟು ವೇತನವನ್ನು ಪರಿಗಣಿಸಿ ನ್ಯಾಯಾಧಿಕರಣ ತಪ್ಪು ಮಾಡಿದೆಯೆಂದು ವಾದಿಸಿದ್ದಾರೆ. ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಯನ್ನು ಹೊರತುಪಡಿಸಿ, ವೇತನ ಚೀಟಿಯಲ್ಲಿ ನಮೂದುಗೊಂಡಿರುವ ಇತರೇ ಎಲ್ಲಾ ಭಾಗಗಳು ಮೃತನು ಹಕ್ಕುಳ್ಳವನಾಗಿರುವ ಪರಿಶ್ರಮ ಧನದ ಮುಖ್ಯಭಾಗವಾಗಿವೆಯೆಂದು ಅವರು ವಾದಿಸಿದ್ದಾರೆ. ಆದ್ದರಿಂದ, ನ್ಯಾಯಾಧಿಕರಣ, ಪರಿಹಾರ ಲೆಕ್ಕ ಹಾಕುವಾಗ ಸಂದಾಯದ ಪರಿಷ್ಕರಣೆಯನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು, ಮೃತನು, ಯುವ ಇಂಜಿನಿಯರ್ ಆಗಿದ್ದು, ವಯಸ್ಸು 29 ವರ್ಷಗಳು, ಬಿ.ಇ. ಪದವಿಯನ್ನು ಪಡೆದಿರುತ್ತಾನೆ ಮತ್ತು ಆಶಾದಾಯಕ ವೃತ್ತಿಯಲ್ಲಿದ್ದನು ಎಂದು ಅವರು ಮುಂದುವರೆದು ವಾದವನ್ನು ಮಂಡಿಸಿದ್ದಾರೆ. ತತ್ಪರಿಣಾಮವಾಗಿ, ಭವಿಷ್ಯತ್ತಿನ ನಿರೀಕ್ಷೆಗಳನ್ನು ಸಹ, ನ್ಯಾಯಾಧಿಕರಣದಿಂದ ಸೇರಿಸಬೇಕೆಂದು ನಿವೇದಿಸಿದ್ದಾರೆ. ಅದಕ್ಕನುಸಾರವಾಗಿ, ಪರಿಹಾರವನ್ನು ಹೆಚ್ಚಿಸುವುದರ ಮೂಲಕ ತನ್ನ ಅಪೀಲನ್ನು ಅಂಗೀಕರಿಸುವಂತೆ ಮತ್ತು ವಿಮಾದಾರರ ಅಪೀಲನ್ನು ವಜಾಗೊಳಿಸುವಂತೆ ಆತನು ಕೋರಿದ್ದಾನೆ.

7. ಅಪಘಾತ ಸಂಭವಿಸಿರುವುದು ಮತ್ತು ವಿಮಾದಾರನ ಹೊಣೆಯು, ವಿವಾದಿತವಾಗಿರುವುದಿಲ್ಲ. ಹೀಗಾಗಿ, ಪರಿಗಣನೆಗಾಗಿ ಉಳಿದಿರುವುದೆಂದರೆ 'ನ್ಯಾಯ ಸಮ್ಮತ ಪರಿಹಾರ'ದ ಮೊತ್ತವನ್ನು ನಿರ್ಧರಿಸುವ ಅಂಶ ಮಾತ್ರವಾಗಿದೆ.

8. ನಿಶಾನೆ ಪಿ.7, ಉದ್ಯೋಗದಾತನು ನೀಡಿರುವ ಮೃತನ ವೇತನ ಚೀಟಿಯಾಗಿದೆ. ಅವನ, ಗಳಿಕೆಯು 37,054/– ರೂಪಾಯಿಗಳು ಆಗಿತ್ತು ಎಂಬುದನ್ನು ಅದು ತೋರಿಸುತ್ತದೆ 7,611/– ರೂಪಾಯಿಗಳನ್ನು ವಿವಿಧ ಶೀರ್ಷಿಕೆಗಳ ಅಡಿಯಲ್ಲಿ

ಕಳೆಯಲಾಗಿದೆ. ನಿವ್ವಳ ಆದಾಯವನ್ನು, 29,443/– ರೂಪಾಯಿಗಳೆಂದು ತಿಳಿಯಪಡಿಸುತ್ತದೆ.

9. ಮೋಟಾರು ವಾಹನ ಅಧಿನಿಯಮ, 1988ನ್ನು ಇತರೇ ವಿಷಯಗಳೊಂದಿಗೆ ಅಧಿನಿಯಮಿತಿಗೊಳಿಸಿದ ವಿಧಾನಮಂಡಲದ ಉದ್ದೇಶವು, ರಸ್ತೆ ಸಂಚಾರ ಅಪಘಾತದಲ್ಲಿ ಬಲಿಯಾದವರಿಗೆ 'ನ್ಯಾಯ ಸಮ್ಮತ ಪರಿಹಾರ' ನೀಡುವುದನ್ನು ಖಚಿತಪಡಿಸುವುದಾಗಿದೆ. ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ತನ್ನ ಅಪೀಲಿಗೆ ಪೂರಕವಾಗಿ ***ನ್ಯಾಷನಲ್ ಇನ್‌ಷೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಇಂದಿರಾ ಶ್ರೀವಾಸ್ತವ ಮತ್ತು ಇತರರು*** [1] ಪ್ರಕರಣದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ. ಸದರಿ ತೀರ್ಪನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳೂ ಸೇರಿದಂತೆ ಮದ್ರಾಸ್ ಉಚ್ಚ ನ್ಯಾಯಾಲಯ ಮತ್ತು ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ, ವಿವಿಧ ತೀರ್ಪುಗಳನ್ನು ಗಮನಿಸಿದ ತರುವಾಯ 'ನ್ಯಾಯ ಸಮ್ಮತ' ವೆಂಬ ಅಭಿವ್ಯಕ್ತಿಯು, ತರ್ಕಬದ್ದ ಅರ್ಥವನ್ನು ನೀಡುವಂತಿರಬೇಕು ಮತ್ತು ಅದು, ಲಾಭದ ಮೂಲಕ್ಕಾಗಿ ಕೊಡುಗೆಯಾಗಬಾರದು ಹಾಗೂ ನ್ಯಾಯ ಸಮ್ಮತ ಮತ್ತು ನಿಷ್ಪಕ್ಷಪಾತ ವಾದ ಎನ್ನುವುದನ್ನು ಪರಿಗಣಿಸುವಾಗ ಎಲ್ಲಾ ಸಂಗತಿಗಳು ಮತ್ತು ಸಂದರ್ಭಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದೆಂದು ಅಭಿಪ್ರಾಯಪಟ್ಟಿದೆ.

10. ಖಾಯಂ ಸ್ವರೂಪದ ಉದ್ಯೋಗವನ್ನು ಟೀಕಿಸುತ್ತಾ, ಮೃತನು, ಇನ್ನೂ, ಅರ್ಹತಾ ಪರಿವೀಕ್ಷಣಾ ಅವಧಿಯಲ್ಲಿದ್ದಾನೆ. ಆದ್ದರಿಂದ, ಅವನು ಗಳಿಸಿದ ಆದಾಯದ ಮೊತ್ತವನ್ನು ಸ್ಥಿರ ಮತ್ತು ಖಾಯಂ ಎಂದು ಅರ್ಥೈಸಲಾಗದು ಎಂದು ನಿವೇದಿಸಿದ್ದಾರೆ.

11. ಪಕ್ಷಕಾರರ ಪರಸ್ಪರ ವಾದಗಳ ಹಿನ್ನೆಲೆಯಲ್ಲಿ, ನಮ್ಮ ಪರಿಗಣನೆಗಾಗಿ ಈ ಮುಂದಿನ ಅಂಶಗಳು ಉದ್ಭವಿಸುತ್ತವೆ:

1. (2008) 2 ಎಸ್‌ಸಿಸಿ 763

*"(1) ಮನೆ ಬಾಡಿಗೆ ಭತ್ಯೆ, ವಾಹನ ಭತ್ಯೆ, ಪ್ರೋತ್ಸಾಹ ಧನ, ನಿಗದಿತ ಉತ್ಪಾದಕ ಪ್ರೋತ್ಸಾಹ ಧನ ಮತ್ತು ವಿಶೇಷ ಭತ್ಯೆಯಂಥವು ಅನುಷಂಗಿಕವಾದ ಲಾಭವಾಗಿದ್ದು, ಪರಿಹಾರವನ್ನು ಲೆಕ್ಕ ಹಾಕುವಾಗ ಪರಿಶ್ರಮದ ಭಾಗದಂತೆ ಪರಿಗಣಿಸಬಹುದೆ ?*

*(2) ಮೃತನ ಆದಾಯವನ್ನು, ಖಾಯಂ ಮತ್ತು ಸ್ಥಿರ ಸ್ವರೂಪದ್ದೆಂದು ಪರಿಗಣಿಸಬಹುದೆ ?*

**ಮರು ಅಂಶ ಸಂ.1**

12. ಅಪಘಾತವು, ದಿನಾಂಕ 19.11.2011 ರಂದು ಸಂಭವಿಸಿದೆ. ನಿಶಾನೆ ಪಿ.7, ಅಕ್ಟೋಬರ್, 2011ರ ತಿಂಗಳ ವೇತನ ಚೀಟಿಯಾಗಿದೆ ಮತ್ತು ಅದನ್ನು, ಆದಾಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸುಸಂಬದ್ಧವಾಗಿ ಪರಿಗಣಿಸಬಹುದು. ಸದರಿ ವೇತನ ಚೀಟಿಯ ಪ್ರಕಾರ ಮೃತನ ಒಟ್ಟು ಗಳಿಕೆಗಳು, ಪ್ರತಿ ತಿಂಗಳು 37,054/– ರೂಪಾಯಿಗಳು ಮತ್ತು ಅದನ್ನು ಮೂಲ ವೇತನ, ಮನೆ ಬಾಡಿಗೆ ಭತ್ಯೆ, ವಾಹನ ಭತ್ಯೆ, ವೈದ್ಯಕೀಯ ಮರು ಪಾವತಿ ವೆಚ್ಚ, ಪ್ರೋತ್ಸಾಹ ಧನ, ನಿಗದಿತ ಉತ್ಪಾದನಾ ಪ್ರೋತ್ಸಾಹ ಧನ ಮತ್ತು ವಿಶೇಷ ಭತ್ಯೆಗಳಾಗಿ ಅಂಥ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ವಿಭಾಗಿಸಲಾಗಿದೆ. ಪಿಎಫ್, ಆದಾಯ ತೆರಿಗೆ, ವೃತ್ತಿ ತೆರಿಗೆ, ವೇತನ ಮುಂಗಡ, ದೂರವಾಣಿ ಕಡಿತ ಮತ್ತು ಸಾರಿಗೆ ವೆಚ್ಚಗಳ ಕಡಿತಗಳು ಸೇರಿರುತ್ತವೆ. ಮೋಟಾರು ವಾಹನ ಅಪಘಾತ ಪ್ರಕರಣದಲ್ಲಿ ಬಲಿಯಾದ ಮರಣದ ಪ್ರಕರಣದಲ್ಲಿ, ಅವಲಂಬನಾ ನಷ್ಟದ ಸಲುವಾಗಿ ಪರಿಹಾರವನ್ನು, ಅವಲಂಬಿತರಿಗೆ ನೀಡಲಾಗುತ್ತದೆ. ಈ ಭಾಗವನ್ನು ಲೆಕ್ಕಹಾಕುವಾಗ, ಮಾಡಬೇಕಾದ ಊಹೆಯೆಂದರೆ, ಮೃತನು ಬದುಕಿದ್ದಲ್ಲಿ ಕುಟುಂಬದ ನಿರ್ವಹಣೆಗಾಗಿ ಲಭ್ಯವಾಗಬಹುದಾದ ಮೊತ್ತವು ಎಷ್ಟಾಗುತ್ತಿತ್ತು ಎಂಬುದನ್ನಷ್ಟೆ. ನಿಶಾನೆ ಪಿ.5, ಪಿ.6 ಮತ್ತು ಪಿ.7, ಆಗಸ್ಟ್ 2011, ಸೆಪ್ಟಂಬರ್ 2011 ಮತ್ತು ಅಕ್ಟೋಬರ್ 2011ರ ತಿಂಗಳ ವೇತನ ಚೀಟಿಗಳಾಗಿವೆ. ಮೂಲ ವೇತನ, ಮನೆ ಬಾಡಿಗೆ ಭತ್ಯೆ,

ವಾಹನ ಭತ್ಯೆ, ವೈದ್ಯಕೀಯ ಮರು ಪಾವತಿ ವೆಚ್ಚ, ನಿಗದಿತ ಉತ್ಪಾದನಾ ಪ್ರೋತ್ಸಾಹ ಧನ ಮತ್ತು ವಿಶೇಷ ಭತ್ಯೆಯ ಶೀರ್ಷಿಕೆಗಳ ಅಡಿಯಲ್ಲಿ ಪ್ರವರ್ಗೀಕರಿಸಲಾದ ಗಳಿಕೆಗಳು ಸ್ಥಿರವಾದವುಗಳೆಂದು ಈ ಮೂರು ವೇತನ ಚೀಟಿಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ ತಿಳಿದುಬರುತ್ತದೆ. 'ಪ್ರೋತ್ಸಾಹ ಧನ' ಶೀರ್ಷಿಕೆಯ ಅಡಿಯಲ್ಲಿ ವೇತನ ಸಂದಾಯದ ಭಾಗವು ಪ್ರತಿ ತಿಂಗಳೂ ಬದಲಾವಣೆಗಳಿಂದ ಕೂಡಿದೆ ಮತ್ತು ಅದು ಹೀಗಾಗಿ ವ್ಯತ್ಯಾಸವಾಗಬಹುದಾದುದಾಗಿದೆ. 2011ರ ಅಕ್ಟೋಬರ್ ತಿಂಗಳ ಕನಿಷ್ಠ ಪ್ರೋತ್ಸಾಹ ಧನ ಗಳಿಕೆಯು 300/– ರೂಪಾಯಿಗಳು. ಈ ವೇತನ ಚೀಟಿಗಳ ತರ್ಕಬದ್ಧ ವಿಶ್ಲೇಷಣೆಯು, ಸ್ಥಿರ ಸಂಗತಿಗಳು, ವಿವಿಧ ಹೆಸರುಗಳ ಅಡಿಯಲ್ಲಿ ಸಂದಾಯವಾಗಿದೆಯೆಂಬ ಮಾಹಿತಿಯು ನಮಗೆ ಕಂಡುಬರುತ್ತದೆ. ಈ ವ್ಯತ್ಯಾಸಕ್ಕೆ ಒಳಗಾಗಿರುವ ಅಂಶವು, 'ಪ್ರೋತ್ಸಾಹ ಧನ' ಶೀರ್ಷಿಕೆಯ ಅಡಿಯಲ್ಲಿ ನೀಡುವ ಸಂದಾಯದ ಮೊತ್ತ ಮಾತ್ರವಾಗಿದೆ. ಈ ಸಂದರ್ಭಗಳಲ್ಲಿ, ಇತರೇ ಎಲ್ಲಾ ಹೆಸರುಗಳ ಅಡಿಯಲ್ಲಿ ನೀಡುವ ಸಂದಾಯದ 'ಪ್ರೋತ್ಸಾಹ ಧನ' ಮೊತ್ತವನ್ನು ಹೊರತುಪಡಿಸಿ ಎಂದರೆ, ಮನೆ ಬಾಡಿಗೆ ಭತ್ಯೆ, ವಾಹನ ಭತ್ಯೆ, ವೈದ್ಯಕೀಯ ಮರುಪಾವತಿ ಭತ್ಯೆ, ಪ್ರೋತ್ಸಾಹ ಧನ, ನಿಗದಿತ ಉತ್ಪಾದನಾ ಪ್ರೋತ್ಸಾಹ ಧನ ಮತ್ತು ವಿಶೇಷ ಭತ್ಯೆಗಳನ್ನು ಮೃತನ ಗಳಿಕೆಯ ಮಜೂರಿಗಳೆಂದು ಮತ್ತು ಅದು, ಕುಟುಂಬದ ಪ್ರಯೋಜನಕ್ಕೆ ಲಭ್ಯವಾಗುತ್ತಿತ್ತೆಂದು ಪರಿಗಣಿಸಬಹುದು. ಅದಕ್ಕನುಸಾರವಾಗಿ, ತನ್ನ ಗಳಿಕೆಯ 'ಪ್ರೋತ್ಸಾಹ ಧನ' ರೂಪದ ಭಾಗವನ್ನು ಹೊರತುಪಡಿಸಿ ವೇತನ ಚೀಟಿಯಲ್ಲಿ ವಿವರಿಸಲಾದ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಮೃತನಿಂದ ಗಳಿಸಲಾದ ಮಜೂರಿಗಳಾಗಿವೆ ಎಂದು ನಾವು ಅಭಿಪ್ರಾಯಪಡುತ್ತೇವೆ.

**ಮರು ಅಂಶ ಸಂ.2:**

13. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಈ ಅಪೀಲಿಗೆ ಪೂರಕವಾಗಿ ಒತ್ತಿ ಹೇಳಿದ ತರುವಾಯದ ಕಾರಣವು, ಮೃತನ ಉದ್ಯೋಗದ ಖಾಯಂ ಸ್ವರೂಪಕ್ಕೆ ಸಂಬಂಧಪಟ್ಟಿದೆ. ಅಪಘಾತದ ದಿನಾಂಕದಂದು, ಮೃತನು, ಪರಿವೀಕ್ಷಣಾ ಅವಧಿಯಲ್ಲಿದ್ದನು, ಅದನ್ನು ಕಾಲದಿಂದ ಕಾಲಕ್ಕೆ

ವಿಸ್ತರಿಸಲಾಗುತ್ತಿತ್ತು. ಆದ್ದರಿಂದ, ಅವನಿಂದ ಗಳಿಸಲಾದ ಮಜೂರಿಗಳನ್ನು, ನಿಯತ ಮತ್ತು ಖಾಯಂ ಸ್ವರೂಪದಂತೆ ಅರ್ಥೈಸಲಾಗದು. ಒಪ್ಪಿತವಾಗಿರುವಂತೆ ಮೃತನು ನಿಶಾನೆ ಪಿ.9ರ ಸಾಕ್ಷ್ಯದಂತೆ ಮೆಕಾನಿಕಲ್ ಇಂಜಿನಿಯರ್ ಬಿ.ಇ. ಪದವೀಧರನಾಗಿದ್ದಾನೆ. ಆತನು ನಿಶಾನೆ ಪಿ.18ರ ಪ್ರಕಾರ ಸ್ನಾತಕೋತ್ತರ ಪದವಿ ಇಂಜಿನಿಯರ್ ಪ್ರಶಿಕ್ಷಣಾರ್ಥಿ ಹುದ್ದೆಗೆ ದಿನಾಂಕ 01.09.2008 ರಂದು ನೇಮಕಗೊಂಡಿದ್ದಾನೆ. ನಿಶಾನೆ ಪಿ.20, ಮೃತನ ಸೇವೆಗಳನ್ನು ಮತ್ತು ಕೊಡುಗೆಯನ್ನು ಮನ್ನಿಸಿ ಹಾಗೂ ಗುರುತಿಸಿ ಆತನಿಗೆ, 1ನೇ ಏಪ್ರಿಲ್ 2011 ರಿಂದ ಜಾರಿಯಾಗುವಂತೆ ಸಹಾಯಕ ವ್ಯವಸ್ಥಾಪಕರ ಹುದ್ದೆಗೆ ಬಡ್ತಿ ನೀಡಲಾಗಿದೆ. ನಿಶಾನೆ ಪಿ.20ರ ಹಿನ್ನೆಲೆಯಲ್ಲಿ, ಮೃತನು, ಖಾಯಂ ಉದ್ಯೋಗದಲ್ಲಿರುವುದಿಲ್ಲ ಮತ್ತು ಆದಾಯದ ಸ್ಥಿರ ಮೂಲವನ್ನು, ಹೊಂದಿರುವುದಿಲ್ಲವೆಂಬ ವಿಮಾಕರ್ತನ ಪರವಾಗಿನ ಮಾನ್ಯ ವಕೀಲರ ವಾದವು ಸಮರ್ಥನೀಯವಲ್ಲದಾಗಿದೆ ಹಾಗಾಗಿ ಅದು ತಿರಸ್ಕರಿಸುವುದಕ್ಕೆ ಮಾತ್ರ ಅರ್ಹವಾಗಿದೆ. ಅದಕ್ಕನುಸಾರವಾಗಿ, ಮೃತನು, ತನ್ನ ಜೀವನದಲ್ಲಿ, ಖಾಯಂ ಉದ್ಯೋಗದಲ್ಲಿದ್ದನು ಮತ್ತು ಒಳ್ಳೆಯ ನಿರೀಕ್ಷಿತ ಭವಿಷ್ಯವನ್ನು ಹೊಂದಿದ್ದನೆಂದು ಅಭಿಪ್ರಾಯಪಟ್ಟು, ಈ ಅಂಶಕ್ಕೆ ನಾವು ಕ್ಲೇಮುದಾರರ ಪರವಾಗಿ ಉತ್ತರಿಸಿದ್ದೇವೆ. ತತ್ಪರಿಣಾಮವಾಗಿ, ವರದಿಯಾಗಿರುವ ***ಸಂತೋಷ್ ದೇವಿ –ವಿರುದ್ಧ– ನ್ಯಾಷನಲ್ ಇನ್‌ಷೂರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಇತರರು*** [2] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನುಕ್ರಮವಾಗಿ ಈ ಮುಂದಿನಂತೆ, ಆತನ ಮರಣದ ಸಮಯದಲ್ಲಿ ಮೃತನ ಆದಾಯವನ್ನು ಶೇಕಡಾ 50% ರಷ್ಟು ಭವಿಷ್ಯತ್ತಿನ ನಿರೀಕ್ಷೆಗಳ ನಷ್ಟದ ಸಲುವಾಗಿ ಸೇರಿಸಲು ಇಚ್ಛಿಸುತ್ತೇವೆಯೆಂದು ನಾವು ಅಭಿಪ್ರಾಯಪಡುತ್ತೇವೆ.

14. ಪರಿಗಣನೆಗಾಗಿ ಈ ಅಂಶಗಳಿಗೆ ನಾವು ಉತ್ತರಿಸಲು ಮುಂದುವರೆದಿದ್ದು, ಉಳಿದಿರುವುದೆಂದರೆ ಪರಿಹಾರದ ಪ್ರಮಾಣವನ್ನು ನಿರ್ಧರಿಸುವುದಾಗಿದೆ. ನೀಡಲಾದ

2. (2012) 6 ಎಸ್‌ಸಿಸಿ 421

ತೀರ್ಪನ್ನು ಪರಿಶೀಲಿಸಿದಾಗ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ಪರಿಹಾರವು, ಸಾಲದು ಮತ್ತು ಹೆಚ್ಚಿಸುವುದು ಅಗತ್ಯವಿದೆಯೆಂದು ನಮಗೆ ಕಂಡುಬಂದಿದೆ.

15. ಅವಲಂಬನಾ ನಷ್ಟದ ಮೊತ್ತವನ್ನು ನಿರ್ಧರಿಸುವುದಕ್ಕೆ, ನಮ್ಮ ದೃಷ್ಠಿಯಲ್ಲಿ, ಗಳಿಕೆ ಸಾಮರ್ಥ್ಯವನ್ನು ನಿರ್ಧರಿಸುವುದಕ್ಕೆ, ನಿಶಾನೆ ಪಿ.7ನ್ನು ಮಾನದಂಡವಾಗಿ ಇಟ್ಟುಕೊಳ್ಳುವುದು ನ್ಯಾಯ ಸಮ್ಮತ ಮತ್ತು ಸಮುಚಿತವಾಗಿದೆ. ನಿಶಾನೆ ಪಿ.7ರ ಪ್ರಕಾರ ಪ್ರತಿ ತಿಂಗಳು ಮೃತನ ಒಟ್ಟು ಗಳಿಕೆಗಳು, 37,054/– ರೂಪಾಯಿಗಳಾಗಿವೆ. ವ್ಯತ್ಯಾಸಗೊಳ್ಳುವ ಅಂಶದ 300/– ರೂಪಾಯಿಗಳ ಪ್ರೋತ್ಸಾಹ ಧನ, ಆದಾಯ ತೆರಿಗೆ 2,423/– ರೂಪಾಯಿಗಳು ಮತ್ತು ವೃತ್ತಿ ತೆರಿಗೆ 200/– ರೂಪಾಯಿಗಳನ್ನು, ಗಳಿಕೆಗಳಿಂದ ಕಡಿತಗೊಳಿಸಲು ಅಗತ್ಯಪಡಿಸಲಾಗಿದೆ. ಮೃತನಿಗೆ, ಮೂವರು ಅವಲಂಬಿತರಿದ್ದಾರೆ. ಆದ್ದರಿಂದ, ತನ್ನ ಗಳಿಕೆಯ 1/3ನ್ನು, ತನ್ನ ವೈಯಕ್ತಿಕ ವೆಚ್ಚಗಳ ಸಲುವಾಗಿ ಕಡಿತಗೊಳಿಸಲು ಇಚ್ಛಿಸುತ್ತೇವೆ. ಪ್ರೋತ್ಸಾಹ ಧನ, ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆ ಕಡಿತದ ತರುವಾಯ, ಮೃತನ ಗಳಿಕೆಗಳು 34,131/– ರೂಪಾಯಿಗಳಿಗೆ ಬರುತ್ತದೆ. ಭವಿಷ್ಯತ್ತಿನ ನಿರೀಕ್ಷೆಗಳ ನಷ್ಟದ ಸಲುವಾಗಿ (17,065/–) ಶೇಕಡಾ 50ರಷ್ಟನ್ನು ಸೇರಿಸಿದ್ದು, ಆತನ ಮರಣದ ಸಮಯದಲ್ಲಿ ಮೃತನ ಗಳಿಕೆ ಸಾಮರ್ಥ್ಯವು, 51,196/– ರೂಪಾಯಿಗಳಿಗೆ ಲೆಕ್ಕ ಹಾಕಲಾಗಿದೆ. ಆತನ, ವಯಸ್ಸು 29 ವರ್ಷಗಳಾಗಿದೆ. ಹಾಗಾಗಿ 17, ಅನ್ವಯಿಸುವ ಗುಣಕವಾಗಿದೆ. ಈ ಅಂಶಗಳೊಂದಿಗೆ, ನಾವು, ಈ ಮುಂದಿನಂತೆ ಪರಿಹಾರದ ಮೊತ್ತವನ್ನು ನಿರ್ಧರಿಸಿದ್ದೇವೆ:

| ಕ್ರ.ಸಂ. | ವಿವರಗಳು | ಮೊತ್ತ |
|---|---|---|
| 1. | ಅವಲಂಬನಾ ನಷ್ಟದ ಸಲುವಾಗಿ (51,196–1/3x12x17) | 69,62,656/– ರೂಪಾಯಿಗಳು |
| 2. | ದಾಂಪತ್ಯದ ನಷ್ಟದ ಸಲುವಾಗಿ | 1,00,000/– ರೂಪಾಯಿಗಳು |
| 3. | ಪ್ರೀತಿ ಮತ್ತು ವಾತ್ಸಲ್ಯದ ನಷ್ಟದ ಸಲುವಾಗಿ | 50,000/– ರೂಪಾಯಿಗಳು |

| | | |
|---|---|---|
| 4. | ಶವ ಸಾಗಾಣಿಕೆ ಮತ್ತು ಶವ ಸಂಸ್ಕಾರದ ವೆಚ್ಚಗಳ ಸಲುವಾಗಿ | 25,000/- ರೂಪಾಯಿಗಳು |
| | **ಒಟ್ಟು** | **71,37,655/- ರೂಪಾಯಿಗಳು** |
| | ಕಳೆತ: ನ್ಯಾಯಾಧಿಕರಣ ಐತೀರ್ಪು ನೀಡಿದ ಪರಿಹಾರ | 47,20,116/- |
| | **ಒಟ್ಟು ಹೆಚ್ಚಳ** | **24,17,540/- ರೂಪಾಯಿಗಳು** |

16. ಈ ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ನಾವು ಈ ಮುಂದಿನಂತೆ ಆದೇಶ ಮಾಡಿದ್ದೇವೆ:

<u>ಆದೇಶ</u>

(i) ಎಂ.ಎಫ್.ಎ. ಸಂ.24620/2012ರಲ್ಲಿ ವಿಮಾದಾರನಿಂದ ದಾಖಲು ಮಾಡಿದ ಅಪೀಲನ್ನು, ವಜಾಗೊಳಿಸಲಾಗಿದೆ. ಈ ಅಪೀಲಿನಲ್ಲಿ ಠೇವಣಿಯಲ್ಲಿರುವ ಮೊತ್ತವನ್ನು, ನ್ಯಾಯಾಧಿಕರಣಕ್ಕೆ ವರ್ಗಾಯಿಸತಕ್ಕದ್ದು.

(ii) ಎಂ.ಎಫ್.ಎ. ಸಂ.24380/2012ರಲ್ಲಿ ಕ್ಲೇಮುದಾರರಿಂದ ದಾಖಲು ಮಾಡಿದ ಅಪೀಲನ್ನು, ಭಾಗಶಃ ಅಂಗೀಕರಿಸಲಾಗಿದೆ. ಈ ದಿನದಿಂದ ಎಂಟು ವಾರಗಳ ಅವಧಿಯೊಳಗೆ ಅರ್ಜಿಯ ದಿನಾಂಕದಿಂದ ಠೇವಣಿಯ ದಿನಾಂಕದವರೆಗೆ ವಾರ್ಷಿಕ ಶೇಕಡಾ 6ರ ಬಡ್ಡಿಯೊಂದಿಗೆ 24,17,540/- ರೂಪಾಯಿಗಳ ಮೊತ್ತವನ್ನು ಠೇವಣಿಯಿಡಲು ಪ್ರತ್ಯರ್ಜಿದಾರ-ವಿಮಾದಾರನಿಗೆ ನಿರ್ದೇಶಿಸಲಾಗಿದೆ.

(iii) ಪರಿಹಾರದ ವಿತರಣೆಯನ್ನು, ನ್ಯಾಯಾಧಿಕರಣ ಐತೀರ್ಪಿನ ನಿಬಂಧನೆಗಳಲ್ಲಿರುವಂತೆ ಮಾಡತಕ್ಕದ್ದು, ವೆಚ್ಚಗಳಿರುವುದಿಲ್ಲ.